<u>ದಿಃ **22.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಡಿ.ಎಂ ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>

**22)** 1994 ನೇ ಇಸ್ವಿಯಿಂದ ನಾನು ಮತ್ತು ನಮ್ಮ ತಂದೆ ತಾಯಿ ಹಾಗೂ ಸಹೋದರರು ಮತ್ತು ಸಹೋದರಿ ಎಲ್ಲರೂ ಒಟ್ಟಿಗೆ ವಾಸ ಮಾಡುತ್ತಿದ್ದೇವು ಅಂದರೆ ಸರಿಯಲ್ಲ, ಏಕೆಂದರೆ ನಾವು 1991 ನೇ ಇಸ್ವಿಯಿಂದಲೇ ಎಲ್ಲರೂ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇವೆ. ವಿ.ಪಿ.ಸಿ ನಂಬರಃ 30 ಮತ್ತು 35/ಬಿ ಎರಡೂ ಆಸ್ತಿಗಳನ್ನು ನಮ್ಮ ತಂದೆ ವಾದಿ ಮತ್ತು ಪ್ರತಿವಾದಿ ನಂಬರಃ 1 ಮತ್ತು 2 ಇವರ ಹೆಸರಿನಲ್ಲಿ ಖರೀದಿಗೆ ತೆಗೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಏಕೆಂದರೆ ಸದರಿ ಆಸ್ತಿಯನ್ನು ನಾನು, ಮತ್ತು 1 ಮತ್ತು 2 ನೇ ಪ್ರತಿವಾದಿ ಎಲ್ಲರೂ ಸೇರಿ ಖರೀದಿಗೆ ತೆಗೆದುಕೊಂಡಿದ್ದೇವೆ. 1991 ನೇ ಇಸ್ವಿಯಲ್ಲಿ ನಾವು ಒಟ್ಟು ಕುಟುಂಬದಿಂದ

ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇವೆ ಎನ್ನುವ ಕುರಿತಾಗಿ ಈ ಪ್ರಕರಣದಲ್ಲಿ ನಾವು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವದಿಲ್ಲ. 1994 ನೇ ಇಸ್ವಿಯಲ್ಲಿ ರಿ.ಸ ನಂಬ: 74/2ಅ 07 ಎಕರೆ 30 ಗುಂಟೆ, ರಿ.ಸ ನಂಬರ: 45/3ಎ 02 ಎಕರೆ 19 ಗುಂಟೆ ಆಸ್ತಿಗಳನ್ನು ಖರೀದಿಗೆ ತೆಗೆದುಕೊಂಡಿಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಬರುವ ಉತ್ಪನ್ನವನ್ನು ಹೊರತುಪಡಿಸಿ ಬೇರೆ ಉತ್ಪನ್ನ ಇರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1994 ನೇ ಇಸ್ವಿಯಲ್ಲಿ ನಾನು ಹಾಗೂ 1 ಮತ್ತು 2ನೇ ಪ್ರತಿವಾದಿ ಎಲ್ಲರೂ ಸೇರಿ ನಮ್ಮ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಸಹ ಲಾವಣಿ ರೂಪದಲ್ಲಿ ಸಾಗುವಳಿ ಮಾಡುತ್ತಿದ್ದೇವು ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ.

**23)** 1991 ನೇ ಇಸ್ವಿಯಲ್ಲಿ ನಾನು ಮತ್ತು 1 ಮತ್ತು 2ನೇ ಪ್ರತಿವಾದಿ ಎಲ್ಲರೂ ಸೇರಿ 10 ಎಕರೆ ಬೇರೆಯವರ ಜಮೀನುಗಳನ್ನು ಲಾವಣಿ ರೂಪದಲ್ಲಿ ಮಾಡುತ್ತಿದ್ದೇವು. ಸದರಿ 10 ಎಕರೆ ಜಮೀನು ಯಾರ ಹೆಸರಿನಲ್ಲಿ ಮತ್ತು ಅವುಗಳ ಸರ್ವೆ ನಂಬರುಗಳು ಯಾವು ಇದ್ದವು ಎಂದು ನನಗೆ ಗೊತ್ತಿಲ್ಲ. ನಾವು ಬೇರೆಯವರ ಜಮೀನುಗಳನ್ನು ಲಾವಣಿ ರೂಪದಲ್ಲಿ ಸಾಗುವಳಿ ಮಾಡಿ ಉತ್ಪನ್ನ ತೆಗೆದುಕೊಳ್ಳುತಿದ್ದೇವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ದಿನಾಂಕ: 15.03.2011 ನೇ ಇಸ್ವಿಯಲ್ಲಿ ಸರ್ವೆ ನಂಬರ: 74/2ಅ ಕ್ಷೇತ್ರ 07 ಎಕರೆ 30 ಗುಂಟೆ ಮತ್ತು ಸರ್ವೆ ನಂಬರ: 45/3ಎ 02 ಎಕರೆ 19 ಗುಂಟೆ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಲಾವಣಿ ರೂಪದಲ್ಲಿ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ, ಸದರಿ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಉತ್ಪನ್ನ ಇರಲಿಲ್ಲ ಅಂದರೆ ಸರಿಯಲ್ಲ.

**24)** ನಾನು ಮತ್ತು ಪ್ರತಿವಾದಿ 1 ಮತ್ತು 2 ಎಲ್ಲರೂ ಸೇರಿ ಸರ್ವೆ ನಂಬರ: 74/2ಅ ಹಾಗೂ ಸರ್ವೆ ನಂಬರ: 45/3ಎ ಎರಡೂ ಆಸ್ತಿಗಳ ಬಂದಂತಹ ಉತ್ಪನ್ನದಿಂದ ವಿ.ಪಿ.ಸಿ ನಂಬರ: 30 ಹಾಗೂ 35/ಬಿ ಎರಡೂ

ಆಸ್ತಿಗಳನ್ನು ಖರೀದಿಗೆ ತೆಗದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಸದರಿ ವಿ.ಪಿ.ಸಿ ನಂಬರಃ 30 ಹಾಗೂ 35/ಬಿ ಎರಡೂ ಆಸ್ತಿಗಳನ್ನು ಏಕತ್ರ ಘರಾಣೇದ ಆಸ್ತಿಗಳು ಇದ್ದರೂ ಸಹ ಅವುಗಳನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ವಿ.ಪಿ.ಸಿ ನಂಬರಃ 30 ಹಾಗೂ 35/ಬಿ ಎರಡೂ ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡು ಇರುತ್ತವೆ ಅಂದರೆ ಸರಿಯಲ್ಲ, ಆದರೆ ಅದರ ಮಧ್ಯ ಬೇರೆಯವರ ಜಾಗೆ ಇರುತ್ತದೆ. ವಿ.ಪಿ.ಸಿ ನಂಬರಃ 35/ಬಿ 2 ನೇ ಪ್ರತಿವಾದಿ ನನ್ನ ಸಹೋದರ ಸುಭಾಷ ಅಲ್ಲಿ ತಗಡಿನ ಶೆಡ್ ಹಾಕಿಕೊಂಡು ವಾಸ ಮಾಡಿಕೊಂಡು ಬರುತ್ತಿದ್ದಾನೆ ಅಂದರೆ ಸರಿಯಲ್ಲ. ಅದೇ ರೀತಿ ವಿ.ಪಿ.ಸಿ ನಂಬರಃ 35/ಬಿ ಇದರಲ್ಲಿಯ ಇನ್ನೊಂದು ಭಾಗದಲ್ಲಿ ನನ್ನ ಸಹೋದರಿಯಾದ 3 ನೇ ಪ್ರತಿವಾದಿ ಸುಮಾ ವಾಸ ಮಾಡಿಕೊಂಡು ಬರುತ್ತಿದ್ದಾಳೆ ಅಂದರೆ ಸಾಕ್ಷಿಯು ಸದರಿ ಮನೆಯನ್ನು ನಾವೇ ಕಟ್ಟಿಸಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಾದಂತಹ ವಿ.ಪಿ.ಸಿ ನಂಬರಃ 47 ಈ ಆಸ್ತಿಯಲ್ಲಿ ಇದ್ದಂತಹ ಮನೆಯು ಸಂಪೂರ್ಣವಾಗಿ ಬಿದ್ದು ಅಲ್ಲಿ ಖಾಲಿ ಜಾಗೆ ಇರುತ್ತದೆ ಅಂದರೆ ಸರಿ.

**25)** ಸದರಿ ವಿ.ಪಿ.ಸಿ ನಂಬರಃ 47 ಈ ಆಸ್ತಿಯಲ್ಲಿ ಇದ್ದಂತಹ ಮನೆಯು 2019 ನೇ ಇಸ್ವಿಯಲ್ಲಿ ಸಂಪೂರ್ಣವಾಗಿ ಬಿದ್ದು ಹೋಗಿರುತ್ತದೆ. ವಿ.ಪಿ.ಸಿ ನಂಬರಃ 47 ದಾವಾ ಆಸ್ತಿಯು ಈ ದಾವೆಯನ್ನು ದಾಖಲು ಮಾಡುವ ಕಾಲಕ್ಕೆ ನಮ್ಮ ತಂದೆಯ ಹೆಸರಿನಲ್ಲಿ ಇತ್ತು ಅಂದರೆ ಸರಿ. ದಾವಾ ಆಸ್ತಿಯಾದಂತಹ ವಿ.ಪಿ.ಸಿ ನಂಬರಃ 47 ಈ ಆಸ್ತಿಯಲ್ಲಿ ಇಲ್ಲಿಯವರೆಗೆ ಯಾವುದೇ ರೀತಿ ಪಾಲು ವಾಟ್ನಿಯಾಗಿರುವದಿಲ್ಲ ಅಂದರೆ ಸರಿ. ಸರ್ವೆ ನಂಬರಃ 45/3 ಎ 02 ಎಕರೆ 19 ಗುಂಟೆ ಆಸ್ತಿಯು ಈ ದಾವೆಯನ್ನು ದಾಖಲು ಮಾಡುವ ಕಾಲಕ್ಕೆ ನಮ್ಮ ತಂದೆಯಲ್ಲಿ ಹೆಸರಿನಲ್ಲಿ ಇತ್ತು ಅಂದರೆ ಸರಿ, ಸಾಕ್ಷಿಯು ಮುಂದುವರೆದು ಈಗಲೂ ಸಹ ನಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಇಲ್ಲಿಯವರೆಗೆ ದಾವಾ ಆಸ್ತಿಯ 45/3 ಎ 02 ಎಕರೆ 19 ಗುಂಟೆಯಲ್ಲಿ ಪಾಲು ವಾಟ್ನಿಯಾಗಿರುವದಿಲ್ಲ ಅಂದರೆ ಸರಿ. ನಮ್ಮ ತಂದೆ ಅವರ ಜೀವಿತ ಕಾಲದಲ್ಲಿ

ದಾವಾ ಆಸ್ತಿ 47 ನಮ್ಮ ತಂದೆ 2 ನೇ ಪ್ರತಿವಾದಿಯಾದಂತಹ ಸುಭಾಷ ಇವರ ಜೊತೆ ವಾಸವಾಗಿದ್ದರು ಅಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ತಂದೆ ಹಾವೇರಿ ಬಸವೇಶ್ವರನಗರದಲ್ಲಿರುವ ಮನೆಯಲ್ಲಿ ನನ್ನ ಜೊತೆ ವಾಸ ಇದ್ದರು ಎಂದು ನುಡಿಯುತ್ತಾರೆ.

**26)** ನಮ್ಮ ತಂದೆ ಮೃತಪಟ್ಟಾಗ ನಾವು ನಮ್ಮ ತಂದೆಯ ಅಂತ್ಯ ಸಂಸ್ಕಾರವನ್ನು ದೇವಗಿರಿ ಯಲ್ಲಾಪುರದಲ್ಲಿ ಮಾಡಿರುತ್ತೇವೆ ಅಂದರೆ ಸರಿ. ನನ್ನ ಅಣ್ಣನಾದ ಸುಭಾಷ ನನ್ನ ತಂದೆ ಮೃತಪಡುವವರೆಗೆ ಆತನೇ ನನ್ನ ತಂದೆಯ ಎಲ್ಲ ಆರೈಕೆಯನ್ನು ಮಾಡಿದ್ದಾನೆ ಅಂದರೆ ಸರಿಯಲ್ಲ. ನಮ್ಮ ತಂದೆ 2 ನೆ ಪ್ರತಿವಾದಿಯಾದಂತಹ ಸುಭಾಷ ಇತನು ಜೊತೆ ವಾಸವಿದ್ದು ಆದ್ದರಿಂದ ನಮ್ಮ ಅಣ್ಣನಾದ ಸುಭಾಷ ಈತನ ಜೊತೆ ಹೆಚ್ಚು ಆತ್ಮೀಯತೆ ಇದ್ದರೂ ಅಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಮ್ಮ ಜೊತೆಯೂ ಸಹ ಆತ್ಮೀಯತೆಯಿಂದ ಇದ್ದರೂ ಎಂದು ನುಡಿಯುತ್ತಾರೆ. ನಮ್ಮ ತಂದೆ ನಮ್ಮ ಅಣ್ಣನಾದ 2 ನೇ ಪ್ರತಿವಾದಿ ಸುಭಾಷ ಈತನ ಜೊತೆ ವಾಸವಿದ್ದರಿಂದ ಆದ್ದರಿಂದ ಆತನ ಜೊತೆ ಆತ್ಮೀಯತೆ ಹೊಂದಿದ್ದರಿಂದ ಆದ್ದರಿಂದ ದಾವಾ ಆಸ್ತಿಯನ್ನು ನನ್ನ ಅಣ್ಣನಾದ ಸುಭಾಷ ಈತನ ಹೆಸರಿನಲ್ಲಿ ಮೃತ್ಯುಪತ್ರವನ್ನು ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ತಂದೆಯವರು ಮಾಡುತ್ತಿದ್ದ ಸಹಿಯನ್ನು ನೋಡಿದರೆ ನಾನು ಗುರುತಿಸಬಲ್ಲೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು**,** ಆಲಿಸಿ ಮುಂದೂಡಲಾಯಿತು**.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ**.**

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.